C.R.P.67

| Form No.4 (Civil) Deposition Sheets (R.P.No.57) |
|---|

## ***1*ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

## **ಎಸ್ ಸಿ ಸಂಖ್ಯೆ: 297/2019**

**ಪ್ರಾಸಾ. 2 ಚಾಸಾ. 6**

**ಸಾಕ್ಷಿದಾರರ ಹೆಸರು** : ಪರಶುರಾಮ

**ತಂದೆ ಹೆಸರು** : ದುಂಡಪ್ಪ

**ವಯಸ್ಸು** : 31 ವರ್ಷಗಳು

**ಉದ್ಯೋಗ** : ಮುಖ್ಯ ಪೇದೆ, ರಾಮನಗರ ಟೌನ್ ಪೊ.ಠಾಣೆ

**ವಾಸ** : ರಾಮನಗರ

## **ಪ್ರಮಾಣ ವಚನ ಬೋಧಿಸಿದ ದಿನಾಂಕ: 14.10.2024**

## **ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಾನು 2015 ರಿಂದ 2021 ರವರೆಗೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ಮಾಡಿರುತ್ತೇನೆ.

2. ದಿನಾಂಕ: 13.06.2019 ರಂದು ರಾತ್ರಿ 8.00 ಗಂಟೆಯಿಂದ ನನಗೆ ರಾತ್ರಿ ಗಸ್ತುಗಾಗಿ ಕರ್ತವ್ಯ ನೇಮಕ ಆಗಿತ್ತು. ನಂತರ ದಿನಾಂಕ:14.06.2019 ರಂದು ಬೆಳಗಿನ ಜಾವ 4.00 ಗಂಟೆಗೆ ಚಾಸಾ-1 ಎಎಸ್ಐ ಸುಭಾಷ್ ಚಂದ್ರ ಗೌಡ ನನಗೆ ಕರೆ ಮಾಡಿ ಉಲ್ಲಾಳು ಹತ್ತಿರ ಬಿ.ಡಿ.ಎ. ರಸ್ತೆ ಹತ್ತಿರ 4 ರಿಂದ 5 ಜನ ಗುಂಪು ಕಟ್ಟಿಕೊಂಡು ದರೋಡೆ ಮಾಡಲು ಹೊಂಚು ಹಾಕುತ್ತಿದ್ದಾರೆ, ನೀವು ಸ್ಥಳಕ್ಕೆ ಹೋಗಿ ನನಗೆ ಮಾಹಿತಿ ತಿಳಿಸಿ ಎಂದು ಹೇಳಿದರು. ಆಗ ನಾನು ಮತ್ತು ಚಾಸಾ-5 ರವರು ಸದರಿ ಬಿಡಿಎ ರಸ್ತೆ ಹತ್ತಿರ ಹೋದೆವು. ಸದರಿ ಸ್ಥಳದಲ್ಲಿ 5 ರಿಂದ 6 ಜನ ಗುಂಪು ಕಟ್ಟಿಕೊಂಡು ದಾರಿಯಲ್ಲಿ ಬರುವವರನ್ನು ಅಡ್ಡಹಾಕಿ ನಗ ನಾಣ್ಯವನ್ನು ದೋಚೋಣ ಎಂದು ಮಾತನಾಡಿಕೊಳ್ಳುತ್ತಿದ್ದರು ಅದನ್ನು ನಾವು ಕೇಳಿಸಿಕೊಂಡೆವು. ನಂತರ ನಾನು ಮತ್ತು ಚಾಸಾ-5 ರವರು ಉಲ್ಲಾಳ

ಹತ್ತಿರವಿರುವ ಹೊರಠಾಣೆಗೆ ವಾಪಸ್ ಬಂದು ಚಾಸಾ-1ರವರಿಗೆ ವಿಚಾರ ತಿಳಿಸಿದೆವು. ನಂತರ ಚಾಸಾ-1, ನಾನು, ಚಾಸಾ-5, ಚಾಸಾ-4 ಮತ್ತು ಚಾಸಾ-7 ಮತ್ತು ಇಬ್ಬರು ಪಂಚರನ್ನು ಕರೆದುಕೊಂಡು ಸದರಿ ಸ್ಥಳಕ್ಕೆ ಹೋದೆವು. ನಂತರ ದರೋಡೆ ಮಾಡಲು ಹೊಂಚು ಹಾಕುತ್ತಿದ್ದ ಆಸಾಮಿಗಳ ಮೇಲೆ ದಾಳಿ ಮಾಡಿದೆವು. ಆಗ ಆಸಾಮಿಗಳು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಪಟ್ಟರು. ಆ ಸಮಯದಲ್ಲಿ ಚಾ.ಸಾ.1 ರವರು ಆಸಾಮಿ ರಮೇಶ್ ನನ್ನು ಹಿಡಿದುಕೊಂಡರು, ಚಾ.ಸಾ.4 ರವರು ಆಸಾಮಿ ಸೋಮಶೇಖರ್ ನನ್ನು ಹಿಡಿದುಕೊಂಡರು. ಚಾ.ಸಾ.5 ರವರು ಆಸಾಮಿ ಮನೋಜ್ ನನ್ನು ಹಿಡಿದುಕೊಂಡರು, ನಾನು ತಿಮ್ಮೇಗೌಡ ಅಲಿಯಾಸ್ ರಘು ನನ್ನು ಹಿಡಿದುಕೊಂಡೆ ಆಗ ಆತನ ಕೈಯಲ್ಲಿ ಒಂದು ಮರದ ದೊಣ್ಣೆ ಇತ್ತು. ಚಾ.ಸಾ.7 ರವರು ಮನೆ ಎಂಬ ಆಸಾಮಿಯನ್ನು ಹಿಡಿದುಕೊಂಡರು.

3. ನಂತರ ಪಂಚರ ಸಮಕ್ಷಮದಲ್ಲಿ 1ನೇ ಆರೋಪಿಯಿಂದ ಒಂದು ದೊಣ್ಣೆಯನ್ನು, 2ನೇಆ ರೋಪಿ ಸೋಮಶೇಖರ್ ನಿಂದ ಕಬ್ಬಿಣದ ಲಾಂಗ್ ಅನ್ನು, 3ನೇ ಆರೋಪಿ ಮನೋಜ್ ನಿಂದ ಕಬ್ಬಿಣದ ರಾಡ್ ಅನ್ನು ಮತ್ತು 4ನೇಆ ರೋಪಿ ತಿಮ್ಮೇಗೌಡನಿಂದ ಮರದ ದೊಣ್ಣೆಯನ್ನು ಮತ್ತು 5ನೇ ಆರೋಪಿಯಿಂದ 100 ಗ್ರಾಂ ಖಾರದಪುಡಿ ಪ್ಯಾಕೆಟ್ ಅನ್ನು ವಶಪಡಿಸಿಕೊಂಡೆವು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ರಿಂದ ಮು.ಮಾ-4 ಎಂದು ಗುರುತಿಸಲಾಗಿದೆ.

4. ನಂತರ ಆರೋಪಿಗಳನ್ನು ಹಾಗೂ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಚಾ.ಸಾ.8 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಾನು ಈ ಬಗ್ಗೆ ಚಾ.ಸಾ.8 ರವರ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿವಸ ನ್ಯಾಯಾಲಯದ ಮುಂದೆ 2 ಮತ್ತು 3ನೇ ಆರೋಪಿಗಳು ಹಾಜರಿದ್ದು ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ದಿವಸ 5ನೇ ಆರೋಪಿ ಗೈರು ಹಾಜರಿದ್ದು, 5ನೇ ಆರೋಪಿ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು ಮತ್ತು 5ನೇ ಆರೋಪಿಯ ಗುರುತಿಸುವಿಕೆಗೆ ತಮ್ಮದು ಅಭ್ಯಂತರ ಇಲ್ಲವೆಂದು ಹೇಳಿರುತ್ತಾರೆ.

**ವಾಟೀ ಸವಾಲುಃ ಶ್ರೀ ಡಬಲ್ಯೂ. ಕೆ. 2, 3 ಮತ್ತು 5ನೇ ಆರೋಪಿತರ ಪರವಾಗಿಃ**

5. ನನ್ನ ರೋಲ್ ಕಾಲ್ ಸಮಯ ರಾತ್ರಿ 8-00 ಗಂಟೆ. ಸದರಿ ಬಿ.ಡಿ.ಎ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಜೋಡಣೆಯಾಗುತ್ತದೆ ಎಂದರೆ ಸಾಕ್ಷಿ ಅದು ಉಲ್ಲಾಳ ಮುಖ್ಯ ರಸ್ತೆಗೆ ಜೋಡಣೆಯಾಗುತ್ತದೆ ಎಂದು ಹೇಳುತ್ತಾರೆ.

ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಜೋಡಣೆಯಾಗುವ ರಸ್ತೆಯಾದ್ದರಿಂದ ಅಲ್ಲಿ ವಾಹಣ ದಟ್ಟಣೆ ಇರುತ್ತದೆ ಎಂದರೆ ಸಾಕ್ಷಿ ಅಲ್ಲಿ ಹೆಚ್ಚು ವಾಹನಗಳು ಓಡಾಡುವುದಿಲ್ಲ ಎಂದು ಹೇಳುತ್ತಾರೆ. ನನ್ನ ಬೀಟ್ ಸಂಖ್ಯೆ 7 ಮತ್ತು 8. ನಾವು ಯಾವುದೇ ಸ್ಥಳಕ್ಕೆ ಹೋಗಿರಲಿಲ್ಲ ಮತ್ತು ಆರೋಪಿತರನ್ನು ಹಿಡಿದಿರುವುದಿಲ್ಲ ಮತ್ತು ಮು.ಮಾ-1 ರಿಂದ 4 ಅನ್ನು ಆರೋಪಿತರಿಂದ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 4 ಅನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಾವು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹಿರಿಯ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.